ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/52/ಕಸಆಂ/ವಿವೇ/2017-18

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 06.07.2017.

## ಸುತ್ತೋಲೆ

ವಿಷಯ : 2017-18ನೇ ಸಾಲಿನಲ್ಲಿ ಪದವಿ ಮಟ್ಟದಲ್ಲಿ ಕನ್ನಡ/ ಸಂಸ್ಕೃತ/ ಆಂಗ್ಲ ಭಾಷೆಯನ್ನು ಐಚ್ಛಿಕ ಭಾಷಾ ವಿಷಯವನ್ನಾಗಿ ತೆಗೆದುಕೊಂಡು ವ್ಯಾಸಂಗ ಮಾಡುತ್ತಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೂತನ/ನವೀಕರಣ ವಿದ್ಯಾರ್ಥಿವೇತನಕ್ಕೆ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

******

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, 2017-18ನೇ ಸಾಲಿನಲ್ಲಿ ಸರ್ಕಾರಿ/ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಪದವಿ ಮಟ್ಟದಲ್ಲಿ ಕನ್ನಡ/ ಸಂಸ್ಕೃತ/ ಆಂಗ್ಲ ಭಾಷೆಯನ್ನು ಐಚ್ಛಿಕ ಭಾಷಾ ವಿಷಯವನ್ನಾಗಿ (Opt. Subjects) ತೆಗೆದುಕೊಂಡು ವ್ಯಾಸಂಗ ಮಾಡುವ ಪ್ರತಿಭಾವಂತ ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ **(ಪ್ರತಿ ತಿಂಗಳಿಗೆ ರೂ.50/- ರಂತೆ 10 ತಿಂಗಳಿಗೆ ರೂ.500/- ಮಾತ್ರ)** ಅರ್ಜಿಯನ್ನು ಆಹ್ವಾನಿಸಿದ್ದು, ಸದರಿ ಅರ್ಜಿಯ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸುತ್ತಾ ಈ ಕೆಳಕಂಡ ಸೂಚನೆಗಳ ಪ್ರಕಾರ ಅರ್ಹ ವಿದ್ಯಾರ್ಥಿಗಳಿಗೆ ಅರ್ಜಿಯನ್ನು ವಿತರಿಸಿ ಅವರುಗಳಿಂದ ಭರ್ತಿ ಮಾಡಿದ ಅರ್ಜಿಯನ್ನು ಪಡೆದು ಅಡಕಗಳೊಂದಿಗೆ **ದಿ:16.08.2017** ರೊಳಗಾಗಿ ಈ ಕಛೇರಿಗೆ ಕಳುಹಿಸಿಕೊಡುವಂತೆ ಸೂಚಿಸಲಾಗಿದೆ. ಸದರಿ ದಿನಾಂಕದ ನಂತರ ಸ್ವೀಕೃತಗೊಳ್ಳುವ ಅರ್ಜಿಗಳನ್ನು ವಿದ್ಯಾರ್ಥಿವೇತನ ಮಂಜೂರಾತಿಗೆ ಪರಿಗಣಿಸಲಾಗುವುದಿಲ್ಲ-ವಾದ್ದರಿಂದ ಭರ್ತಿ ಮಾಡಿದ ಅರ್ಜಿಗಳನ್ನು ನಿಗಧಿತ ದಿನಾಂಕದೊಳಗೆ ಸಲ್ಲಿಸುವಂತೆ ಸೂಚಿಸಲಾಗಿದೆ.

**ಸೂಚನೆಗಳು:**

(1) ದ್ವಿತೀಯ ಪಿ.ಯು.ಸಿ. ತರಗತಿಯಲ್ಲಿ ಏಪ್ರಿಲ್ 2017ರ ಪರೀಕ್ಷೆಯಲ್ಲಿ ಪ್ರಥಮ ಬಾರಿ ಶೇಕಡ 50 ಕ್ಕಿಂತ ಮೇಲ್ಪಟ್ಟು ಅಂಕಗಳನ್ನು ಪಡೆದು ಉತ್ತೀರ್ಣರಾಗಿರುವ ವಿದ್ಯಾರ್ಥಿಗಳು ಮಾತ್ರ ಅರ್ಜಿ ಸಲ್ಲಿಸುವುದು.

(2) ಪದವಿ ಹಂತದಲ್ಲಿ ಕನ್ನಡ ಮತ್ತು ಇಂಗ್ಲೀಷ್ ಭಾಷೆಯನ್ನು ಐಚ್ಛಿಕ ಭಾಷಾ ವಿಷಯವಾಗಿ ತೆಗೆದುಕೊಂಡಿರುವ ವಿದ್ಯಾರ್ಥಿಗಳಿಗೆ ತಲಾ 10 ವಿದ್ಯಾರ್ಥಿವೇತನಗಳು ಮತ್ತು ಸಂಸ್ಕೃತ ಐಚ್ಛಿಕ ಭಾಷಾ ವಿಷಯವಾಗಿ ತೆಗೆದುಕೊಂಡಿರುವ ವಿದ್ಯಾರ್ಥಿಗಳಿಗೆ 09 ವಿದ್ಯಾರ್ಥಿವೇತನಗಳು ಮಾತ್ರ ಲಭ್ಯವಿರುತ್ತದೆ. ಆದ್ದರಿಂದ ಸಂಬಂಧಿಸಿದ ಐಚ್ಛಿಕ ವಿಷಯದಲ್ಲಿ ಶೇ.50 ಕ್ಕಿಂತ ಹೆಚ್ಚು ಅಂಕ ಗಳಿಸಿದ ಅರ್ಹ ವಿದ್ಯಾರ್ಥಿಗಳ ಅರ್ಜಿಗಳನ್ನು ಮಾತ್ರ ಕಳುಹಿಸುವುದು.

(3) ಪದವಿ ಮಟ್ಟದಲ್ಲಿ ಪ್ರಥಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವವರು ಮಾತ್ರ ನೂತನ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಸಲ್ಲಿಸಬೇಕು.

(4) 2015-16 ಮತ್ತು 2016-17ನೇ ಸಾಲಿನಲ್ಲಿ ನವೀಕರಣ ವಿದ್ಯಾರ್ಥಿವೇತನ ಮಂಜೂರಾಗಿರುವ ವಿದ್ಯಾರ್ಥಿಗಳು ಹಿಂದಿನ ಸಾಲಿನ ಎಲ್ಲಾ ಸೆಮಿಸ್ಟರ್‌ಗಳಲ್ಲಿ ಪ್ರಥಮ ಪ್ರಯತ್ನದಲ್ಲಿ ಉತ್ತೀರ್ಣರಾಗಿದ್ದಲ್ಲಿ ಮಾತ್ರ 2017-18ನೇ ಸಾಲಿನಲ್ಲಿ ನವೀಕರಣ ವಿದ್ಯಾರ್ಥಿವೇತನಕ್ಕೆ ಅರ್ಜಿಗಳನ್ನು ಸಲ್ಲಿಸಬೇಕು.

(5) ಅಪೂರ್ಣ, ಅಸ್ಪಷ್ಟ ಮತ್ತು ನಿಗದಿತ ದಿನಾಂಕದ ನಂತರ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

(6) ನೂತನ ಮಂಜೂರಾತಿಗಾಗಿ ಅರ್ಜಿಯೊಂದಿಗೆ ಪಿ.ಯು.ಸಿ ಅಂಕಪಟ್ಟಿ ಪ್ರತಿ, ಆಧಾರ್‌ಕಾರ್ಡ್ ಪ್ರತಿ, ಬ್ಯಾಂಕ್ ಪಾಸ್ ಬುಕ್ ಪ್ರತಿಗಳನ್ನು ಹಾಗೂ ವಿದ್ಯಾರ್ಥಿ ಮೊಬೈಲ್ ಸಂಖ್ಯೆಯನ್ನು ನಮೂದಿಸತಕ್ಕದ್ದು.

(7) ಮೇಲ್ಕಂಡ ಮಾಹಿತಿಯನ್ನು ವಿದ್ಯಾರ್ಥಿಗಳ ಗಮನಕ್ಕೆ ತರುವುದು ಹಾಗೂ ಈ ಅಂಶಗಳನ್ನು ಸೂಚನಾ ಫಲಕದಲ್ಲಿ ಪ್ರಕಟಿಸಿ ವಿದ್ಯಾರ್ಥಿಗಳಿಂದ ಭರ್ತಿ ಮಾಡಿದ ಅರ್ಜಿಗಳನ್ನು ಪಡೆದು ತಮ್ಮ ಹಂತದಲ್ಲಿಯೇ ಸಂರಕ್ಷಿಸಿಡಲು ಸೂಚಿಸಿದೆ. ಮತ್ತು ಸದರಿ ಅರ್ಜಿಯನ್ನು ಲಗತ್ತುಗಳೊಂದಿಗೆ ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಿಗಧಿತ ನಮೂನೆಯಲ್ಲಿ ಭರ್ತಿ ಮಾಡಿ ಸ್ಕ್ಯಾನ್ ಮಾಡಿದ ಸಾಫ್ಟ್ ಪ್ರತಿಯನ್ನು **ದಿ:16.08.2017ರೊಳಗೆ** ***dce.language.scholarship2017@gmail.com*** ಇ-ಮೇಲ್ ವಿಳಾಸಕ್ಕೆ ಸಲ್ಲಿಸುವಂತೆ ಸೂಚಿಸಲಾಗಿದೆ.

***(ಕರಡುಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)***

**ಕಾಲೇಜು ಶಿಕ್ಷಣ ನಿರ್ದೇಶಕರು (ಪ್ರ)**

**ಇವರಿಗೆ:**

ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

**ಪ್ರತಿಯನ್ನು :**

1. ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರು- ಮಾಹಿತಿಗಾಗಿ.

*E:2017-18/File-52/Lasng SCH*

2. ಮಾಹಿತಿ ಅಧಿಕಾರಿಗಳು, ಮಾಹಿತಿ ವಿಭಾಗ, ಕೇಂದ್ರಕಛೇರಿ, ಬೆಂಗಳೂರು – ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಿದೆ.
3. ಮ್ಯಾನೇಜರ್, ಹಣ ಮತ್ತು ಪಾವತಿ ವಿಭಾಗ, ಕೇಂದ್ರಕಛೇರಿ, ಬೆಂಗಳೂರು.
4. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

2017-18ನೇ ಸಾಲಿನ ಪದವಿ ತರಗತಿಯ ಕನ್ನಡ :ಇಂಗ್ಲೀಷ್:ಸಂಸ್ಕೃತ ಐಚ್ಛಿಕ ಭಾಷಾ ವಿಷಯ ವಿದ್ಯಾರ್ಥಿವೇತನ

ಭಾಗ-1

(ಇ-ಮೇಲ್ ನಲ್ಲಿ ಸಲ್ಲಿಸಬೇಕಾಗಿರುವ ವಿವರ)

| ವಿದ್ಯಾರ್ಥಿಯ ಪೂರ್ಣ ಹೆಸರು, (ಪಿ.ಯು.ಸಿ ಅಂಕಪಟ್ಟಿಯಲ್ಲಿದ್ದಂತೆ) | ತಂದೆ/ ಪೋಷಕರ ಹೆಸರು | ವ್ಯಾಸಂಗ ಮಾಡುತ್ತಿರುವ ಕಾಲೇಜಿನ ಹೆಸರು | ತರಗತಿ | ಪದವಿ ತರಗತಿಯಲ್ಲಿ ತೆಗೆದುಕೊಂಡಿ-ರುವ ಐಚ್ಛಿಕ ಭಾಷಾ ವಿಷಯ | ಪ್ರಸ್ತುತ ತರಗತಿಗೆ ಪ್ರವೇಶಾತಿ ಪಡೆದ ದಿನಾಂಕ | ಜನ್ಮ ದಿನಾಂಕ | ಖಾಯಂ ವಿಳಾಸ: (PIN Code compulsory) | ಪ್ರಥಮ ಯತ್ನದಲ್ಲೇ ತೇರ್ಗಡೆಯಾದಿರಾ ? ಹೌದು/ಇಲ್ಲ | ಐಚ್ಛಿಕ ಭಾಷೆಯಲ್ಲಿ ಪಡೆದ ಅಂಕ: (ದೃಢೀಕೃತ ಅಂಕಪಟ್ಟಿ ಲಗತ್ತಿಸುವುದು) | ಹಿಂದಿನ ಪರೀಕ್ಷೆಯಲ್ಲಿ ಪಡೆದ ಒಟ್ಟು ಅಂಕಗಳು ಹಾಗೂ ಶೇಕಡಾವಾರು | ಇತರೆ ವ್ಯಾಸಂಗ ವೇತನ ಅಥವಾ ಶಿಷ್ಯವೇತನಗಳನ್ನು ಅರ್ಜಿದಾರರು ಪಡೆಯುತ್ತಿರುವವರೇ? ಹೌದಾದಲ್ಲಿ ವ್ಯಾಸಂಗ: ವೇತನದ ಪ್ರತಿ ತಿಂಗಳ ದರ ಮತ್ತು ಅದನ್ನು ತೆಗೆದುಕೊಂಡ ದಿನಾಂಕಗಳ ವಿವರ: | ವಿದ್ಯಾರ್ಥಿಯು ಬೇರೆ ಯಾವುದೇ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಿರುವರೇ ಹಾಗಿದ್ದರೆ ವಿವರ ನೀಡುವುದು. |
|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 |

## ಕರ್ನಾಟಕ ಸರ್ಕಾರ
## ಕಾಲೇಜು ಶಿಕ್ಷಣ ಇಲಾಖೆ

<u>2017-18ನೇ ಸಾಲಿನ ಪದವಿ ತರಗತಿಯಲ್ಲಿ ಕನ್ನಡ :ಇಂಗ್ಲೀಷ್: ಸಂಸ್ಕೃತವನ್ನು ಐಚ್ಛಿಕ ಭಾಷಾ ವಿಷಯವನ್ನಾಗಿ ತೆಗೆದುಕೊಂಡು ವ್ಯಾಸಂಗ ಮಾಡುವುದಕ್ಕೆ ಸರ್ಕಾರದ ವಿದ್ಯಾರ್ಥಿ ವೇತನ</u>

ಕಾಲೇಜಿನಲ್ಲಿ ಸಂರಕ್ಷಿಸಿಡಬೇಕಾದ ಪ್ರತಿ

| |
|---|
| ವಿದ್ಯಾರ್ಥಿಯಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಲಗತ್ತಿಸಿ ಪ್ರಾಂಶುಪಾಲರ ಸಹಿ ಹಾಗೂ ಮೊಹರಿನೊಂದಿಗೆ ದೃಢೀಕರಿಸಿರಬೇಕು. |

### ಭಾಷಾ ವಿದ್ಯಾರ್ಥಿವೇತನದ ಅರ್ಜಿ ನಮೂನೆ

**ಅರ್ಜಿಯನ್ನು ಭರ್ತಿ ಮಾಡುವುದಕ್ಕೆ ಮೊದಲು ಪ್ರತಿಯೊಂದು ಹಂತವನ್ನು ಜಾಗರೂಕತೆಯಿಂದ ಓದಿ ನಂತರ ಭರ್ತಿ ಮಾಡಬೇಕು.**

### <u>ವಿಭಾಗ-ಎ</u>

| | | |
|---|---|---|
| 1 | ವಿದ್ಯಾರ್ಥಿಯ ಪೂರ್ಣ ಹೆಸರು : | |
| 2 | ತಂದೆ/ಪೋಷಕರ ಹೆಸರು : | |
| 3 | ವ್ಯಾಸಂಗ ಮಾಡುತ್ತಿರುವತರಗತಿ :<br>(ಪದವಿ ತರಗತಿಯಲ್ಲಿ ತೆಗೆದುಕೊಂಡಿರುವ ಐಚ್ಛಿಕ ಬಾಷಾ ವಿಷಯ) | |
| 4 | ಪ್ರಸ್ತುತತರಗತಿಗೆ ಪ್ರವೇಶಾತಿ ಪಡೆದ ದಿನಾಂಕ: | |
| 5 | (ಅ) ಜನ್ಮ ದಿನಾಂಕ:<br>(ಆ) ಜನ್ಮ ಸ್ಥಳ, ಜಿಲ್ಲೆ ಮತ್ತು ರಾಜ್ಯ: | |
| 6 | ಖಾಯಂ ವಿಳಾಸ: | |
| 7 | ಪ್ರಸಕ್ತ ವಿಳಾಸ:<br>(PIN Code compulsory) | |
| 8 | ಪದವಿ ಪೂರ್ವ ಶಿಕ್ಷಣ ಪಡೆದ ಕಾಲೇಜಿನ/ ಸಂಸ್ಥೆಯ ಹೆಸರು ಮತ್ತು ಸ್ಥಳ : | |
| 9 | ತೇರ್ಗಡೆಯಾದ ಹಿಂದಿನ ವರ್ಷದ ಪರೀಕ್ಷೆಯ ಹೆಸರು : | |
| 10 | ಪ್ರಥಮ ಯತ್ನದಲ್ಲೇ ತೇರ್ಗಡೆಯಾದಿರಾ ? | |
| 11 | ಕನ್ನಡ/ಇಂಗ್ಲೀಷ್/ಸಂಸ್ಕೃತ ವಿಷಯದಲ್ಲಿ ಪಡೆದ ಅಂಕ:<br>(ದೃಢೀಕೃತ ಅಂಕಪಟ್ಟಿ ಲಗತ್ತಿಸುವುದು) | |
| 12 | ಹಿಂದಿನ ಪರೀಕ್ಷೆಯಲ್ಲಿ ಪಡೆದ ಒಟ್ಟು ಅಂಕಗಳು ಹಾಗೂ ಶೇಕಡಾವಾರು | |
| 13 | ಇತರೆ ವ್ಯಾಸಂಗ ವೇತನ ಅಥವಾ ಶಿಷ್ಯವೇತನಗಳನ್ನು ಅರ್ಜಿದಾರರು ಪಡೆಯುತ್ತಿರುವವರೇ? ಹೌದಾದಲ್ಲಿ ವ್ಯಾಸಂಗ: ವೇತನದ ಪ್ರತಿ ತಿಂಗಳ ದರ ಮತ್ತು ಅದನ್ನು ತೆಗೆದುಕೊಂಡ ದಿನಾಂಕಗಳ ವಿವರ: | |
| 14 | ವಿದ್ಯಾರ್ಥಿಯು ಬೇರೆ ಯಾವುದೇ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಿರುವರೇ ಹಾಗಿದ್ದರೆ ವಿವರ ನೀಡುವುದು. | |

...2

## ವಿಭಾಗ- ಬಿ

## ಅರ್ಜಿಯೊಂದಿಗೆ ವಿದ್ಯಾರ್ಥಿಯು ಸಲ್ಲಿಸಬೇಕಾದ ದಾಖಲೆಗಳ ವಿವರ

(1) ಪಿ.ಯು.ಸಿ ಅಂಕಪಟ್ಟಿ ದೃಢೀಕೃತಪ್ರತಿ (ನೂತನ ಮಂಜೂರಾತಿಗಾಗಿ)

(2)ನವೀಕರಣ ವಿದ್ಯಾರ್ಥಿವೇತನ ಮಂಜೂರಾತಿಗಾಗಿ ಹಿಂದಿನ ಪರೀಕ್ಷೆಯಎಲ್ಲಾ ಸೆಮ್‌ಗಳ ಅಂಕಪಟ್ಟಿಗಳ ಜೆರಾಕ್ಸ್ ಪ್ರತಿ ದೃಢೀಕರಣದೊಂದಿಗೆ ಲಗತ್ತಿಸತಕ್ಕದ್ದು.

(3) ವ್ಯಾಸಂಗ ಪ್ರಮಾಣ ಪತ್ರ

(4) ವಿದ್ಯಾರ್ಥಿಯ ಆಧಾರ್‌ಕಾರ್ಡ್‌ನ ಜೆರಾಕ್ಸ್ ಪ್ರತಿ

(5) ವಿದ್ಯಾರ್ಥಿಯ ಬ್ಯಾಂಕ್ ಪಾಸ್ ಪುಸ್ತಕದ ಜೆರಾಕ್ಸ್ ಪ್ರತಿ (ಬ್ಯಾಂಕ್ ಹೆಸರು. ಶಾಖೆ ಹಾಗೂ IFS& MICR No.)

(6)ವಿದ್ಯಾರ್ಥಿ/ಪೋಷಕರ ಮೊಬೈಲ್ ಸಂಖ್ಯೆ:

ಮೇಲ್ಕಂಡ ಎಲ್ಲಾ ಮಾಹಿತಿಗಳು ಸರಿಯಾಗಿರುತ್ತವೆ ಎಂದು ಹಾಗೂ ಅರ್ಜಿ ಸಲ್ಲಿಸಿರುವ ಭಾಷಾ ವಿದ್ಯಾರ್ಥಿವೇತನಕ್ಕೆ ನಾನು ಆಯ್ಕೆಯಾದ ಪಕ್ಷದಲ್ಲಿ ವ್ಯಾಸಂಗಕ್ಕೆ ನನ್ನ ಪೂರ್ಣ ಕಾಲವನ್ನು ವಿನಿಯೋಗಿಸುತ್ತೇನೆಂದು ಮತ್ತು ಇತರೆ ಬೇರೆ ಮೂಲದಿಂದ ಬರುವಂತಹ ಯಾವುದೇ ವಿದ್ಯಾರ್ಥಿವೇತನವನ್ನು ಸ್ವೀಕರಿಸುವುದಿಲ್ಲವೆಂದು ನಾನು ಈ ಮೂಲಕ ಘೋಷಿಸುತ್ತೇನೆ.

**ಅರ್ಜಿದಾರನ/ಳ ಸಹಿ**

ಸ್ಥಳ:
ದಿನಾಂಕ:

## ಪ್ರಾಂಶುಪಾಲರ ದೃಢೀಕರಣ

___________ ಎಂಬ ವಿದ್ಯಾರ್ಥಿ/ವಿದ್ಯಾರ್ಥಿನಿಯು 2017-18ನೇ ಸಾಲಿನಲ್ಲಿ ಈ ಕಾಲೇಜಿನಲ್ಲಿ _______ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುತ್ತಾರೆ ಎಂದು ದೃಢೀಕರಿಸಲಾಗಿದೆ.

**ಪ್ರಾಂಶುಪಾಲರ ಸಹಿ ಕಾಲೇಜಿನ ಮೊಹರಿನೊಂದಿಗೆ**

ಸ್ಥಳ:

ದಿನಾಂಕ:

*D:2017-18/Lang sch appl. Form 17-18*